**ಸಾಕ್ಷಿಗೆ ದಿನಾಂಕಃ 31.01.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ವಿ.ಕೆ. ವಕೀಲರಿಂದಃ**

ನಾನು ಶಿರಸ್ತೇದಾರರಾಗಿ ನಿವೃತ್ತಿ ಹೊಂದಿರುತ್ತೇನೆ. ಈ ಪ್ರಕರಣದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ದಿ.05.07.2023 ರಂದು ಪಿರ್ಯಾದಿಯು ನನಗೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿ. ದಿ.11.07.2023 ರಂದು ನಾನು ಪ್ರತ್ಯುತ್ತರ ನೋಟಿಸನ್ನು ಕಳುಹಿಸಿರುತ್ತೇನೆ ಎಂದರೆ ಸರಿ. ನಾನು ವಾಸ ಮಾಡುವ ವ್ಯಾಪ್ತಿಯು ಕುದೇರು ಪೋಲಿಸ್ ಠಾಣೆಗೆ ಬರುತ್ತದೆ. ಪಿರ್ಯಾದಿಯ ವಿರುದ್ಧ ಸಂಬಂಧಪಟ್ಟ ದೂರನ್ನು ದಾಖಲು ಮಾಡಿರುವುದಿಲ್ಲ. ದಿ.03.03.2023 ರಂದು ನಾನು ಪಿರ್ಯಾದಿಯಿಂದ ರೂ.25,000/-ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುವಾಗ ಅದರ ವ್ಯಾಪ್ತಿಗೆ ಬರುವ ಸರ್ವೆ ನಂಬರುಗಳಲ್ಲಿ ದರ್ಕಾಸ್ತು, ಗೋಮಾಳ ಮತ್ತು ರೈತರ ಜಮೀನುಗಳ ಬಗ್ಗೆ ಗೊತ್ತಿರುತ್ತದೆ. ಮೂಡಲ ಅಗ್ರಹಾರ ಗ್ರಾಮದ ಸರ್ವೆ ನಂ.159 ರಲ್ಲಿ 4 ಎಕರೆಯನ್ನು ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆ. ಸರ್ವೆ ನಂ.33/4 ರಲ್ಲಿ 2 ಎಕರೆ 20 ಗುಂಟೆ ಧ್ರಾಕ್ಷಾಯಿಣಿ ಬಿನ್ ಸುಬ್ಬಪ್ಪರವರಿಗೆ1976 ರಲ್ಲಿ ದರ್ಕಾಸ್ತು ಮೂಲಕ ಬಂದಿರುತ್ತದೆ. ಅವರು ತೀರಿಕೊಂಡ ಮೇಲೆ ನನ್ನ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ. ಸರ್ವೆ ನಂ.159 ರ ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ.

ಪಿರ್ಯಾದಿದಾರರು ಶ್ರೀಕಂಠಸ್ವಾಮಿ ರವರಿಗೆ ನಮ್ಮ ಮನೆಯ ಬಳಿ ಬಂದಿದ್ದರು. ದಿ.10.09.2022 ರಂದು ಪಿರ್ಯದಿದಾರರುಗಳು ನಮ್ಮ ಮನೆಗೆ ಬಂದು ಕ್ರಯಕ್ಕೆ ಪಡೆದವರಿಂದ ಹಣವನ್ನು ನನ್ನ ಖಾತೆಗೆ ವರ್ಗಾಯಿಸುವುದಾಗಿ ಹೇಳಿದ ಮೇರೆಗೆ ಅವರಿಗೆ ನನ್ನ ಚೆಕ್ ನ್ನು ನೀಡಿರುತ್ತೇನೆ. ಮಹಾಲಿಂಗು ಮತ್ತು ಪ್ರಹ್ಲಾದ ರವರ ಜೊತೆ ತಲಕಾಡು ಗ್ರಾಮದಲ್ಲಿ ಜಮೀನನ್ನು ಖರಿದಿಸಲು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಪಿರ್ಯಾದಿದಾರರಾದ ದೇವರಾಜು ಮತ್ತು ರಾಮೇಗೌಡರಿಂದ ತಲಾ ರೂ.25,000/-ಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿವೃತ್ತಿಯ ನಂತರ ನಾನು ಜಮೀನುಗಳನ್ನು ಖರೀದಿ ಮಾಡುವುದು ಮತ್ತು ಮಾರಾಟ ಮಾಡುವ ವ್ಯವಹಾರವನ್ನು ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಚಂದ್ರು ರವರನ್ನು ವಿಚಾರಣೆ ಮಾಡಲು ತೊಂದರೆ ಇರುವುದಿಲ್ಲ.

ಚಂದ್ರು ರವರಿಗೆ ನೀಡಿದ ಚೆಕ್ ಗೂ ಪಿರ್ಯಾದಿದಾರರಾದ ದೇವರಾಜು ಮತ್ತು ರಾಮೇಗೌಡರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.33 ರಲ್ಲಿ 34 ಎಕರೆ ಗೋಮಾಳ ಎಂದು ನಮುದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಅಕ್ರಮವಾಗಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಮಾರಾಟ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ದಿ.27.04.2022 ರಂದು ಹರೀಶ್ ಮತ್ತು ನಾಗರಾಜು ರವರಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ನಿ.ಡಿ.3 ರ ಜಮೀನು ಗೋಮಾಳ ಆಗಿದ್ದರಿಂದ ಸದರಿ ಕರಾರನನ್ನು ರದ್ದುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.159 ರಲ್ಲಿ ಮೂಡಲ ಅಗ್ರಹಾರ ಗ್ರಾಮದಲ್ಲಿ ಪ್ರಸನ್ನ ಗೋವಂಡೆ ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಪ್ರಸ್ತುತ ಸದರಿ ಸ್ವತ್ತಿನ ಖಾತೆ ಸದರಿ ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಸದರಿ ಸ್ವತ್ತು ಗೋಮಾಳವಾಗಿದ್ದು, ಅದ್ದನು ಮಾರಾಟ ಮಾಡುವ ಹಕ್ಕು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೋಸ್ಕರ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಲದ ಮರುಪಾವತಿಗಾಗಿ ನಿ.ಪಿ.1 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**